

## ನೀರಿಲ್ಲದ ಮಾವಿನ ಕೆರೆಯ ಕಂಡಿರಾ?

ರಾಯಚೂರಿನ ನಗರದಲ್ಲಿ ಮಾವಿನ ಕೆರೆ ಇದೆ. ಹಿಂದಿಯ ‘ಆಮ್ತಲಾಬ್’ ಎಂಬ ಪದದಿಂದ ಇದು ಬಂದಿದ್ದು, ಇದರ ಕನ್ನಡದ ಅರ್ಥ ಸಾರ್ವಜನಿಕರ ಕೆರೆ. ಮಾವಿನ ಕೆರೆ ಪಕ್ಕವೇ ‘ಖಾಸ್ ಬಾವಿ’ ಇದೆ. ಹಿಂದಿಯಲ್ಲಿ ಖಾಸ್ ಎಂದರೆ ವಿಶೇಷವಾದ, ತಮ್ಮ ಸ್ವಂತಕ್ಕೆ ಬಳಸಿಕೊಳ್ಳಲು ಇರುವ ಕೆರೆ ಎಂದು. ಅಂದರೆ ಇದು ಸಾರ್ವಜನಿಕರ ಬಳಕೆಗೆ ಮುಕ್ತವಾಗಿಲ್ಲದ್ದು. ಈ ಕೆರೆ ನಿರ್ಮಾಣವಾಗಿದ್ದು ರಾಜಮಹಾರಾಜರ ಕಾಲದಲ್ಲಿ. ಹೀಗಾಗಿ ಇದು ಐತಿಹಾಸಿಕ ಕೆರೆಯಾಗಿದ್ದು, ಇತಿಹಾಸದ ಹಲವು ಕುರುಹುಗಳು ಇಲ್ಲಿವೆ. ರಾಯಚೂರು ನಗರದಲ್ಲಿ ಆಮ್ ತಲಾಬ್, ಖಾಸ್ ತಲಾಬ್ ಎರಡೂ ಪಕ್ಕ ಪಕ್ಕದಲ್ಲೇ ಇಂದಿಗೂ ಇವೆ. ಮಾವಿನ ಕೆರೆಯನ್ನು ಮೀನುಗಾರಿಕೆಗೆ ಬಳಸಿದರೆ, ಖಾಸ್ ಬಾವಿಯನ್ನು ಗಣೇಶ ಮೂರ್ತಿಗಳ ವಿಸರ್ಜನೆಗೆ ಬಳಸಲಾಗುತ್ತಿದೆ. ಈ ಕೆರೆಯನ್ನು ಹನಿ ನೀರಿಲ್ಲದೆ ಬರಡಾಗಿ ನೋಡಿರುವುದು ಬಹಳ ವಿರಳ. ಇದರಂತೆ ಈ ಹಿಂದೆ ಕೆರೆಯ ಅಭಿವೃದ್ಧಿಗಾಗಿ ಹೂಳನ್ನು ಎತ್ತುವುದರ ಸಲುವಾಗಿ ನೀರನ್ನು ಖಾಲಿ ಮಾಡಿದರ ಪರಿಣಾಮ ಮಾವಿನ ಕೆರೆ ಹನಿ ನೀರಿಲ್ಲದೆ ಬಿಕೋ ಎನ್ನುತ್ತಿದೆ.

—ಈರಣ್ಣ ಬೆಂಗಾಲಿ, ರಾಯಚೂರು



## ‘ಪಕ್ಷಿಕಾಶಿ’ ಅಂತರಗಟ್ಟೆ ಕೆರೆ

ಚಿತ್ರದುರ್ಗ—ಚಿಕ್ಕಮಗಳೂರು ಜಿಲ್ಲೆಗಳ ಗಡಿಭಾಗದ ಹಳ್ಳಿ, ಕಡೂರು ತಾಲ್ಲೂಕಿನ ಅಂತರಗಟ್ಟೆಯ ಕೆರೆಯೀಗ ಪಕ್ಷಿಕಾಶಿಯಾಗಿ ಮಾರ್ಪಟ್ಟಿದೆ. ಸುತ್ತಲಿನ ಹಲವಾರು ಕೆರೆಗಳು ಬರದಿಂದಾಗಿ ಬತ್ತಿರುವ ಕಾರಣ, ತಕ್ಕಮಟ್ಟಿಗೆ ನೀರಿರುವ ಈ ವಿಶಾಲ ಕೆರೆಯತ್ತ ಹಲವು ಬಣ್ಣ ಬಣ್ಣದ ಬಾನಾಡಿಗಳು ಹಾರಿ ಬರುತ್ತಿವೆ. ದಾಸ ಕೊಕ್ಕರೆ(ಪೇಂಟೆಡ್ ಸ್ಟಾರ್ಕ್), ಬೂದು ಕೊಕ್ಕರೆ(ಗ್ರೇ ಹೆರಾನ್), ಕಪ್ಪು ತಲೆಯ ಐಬಿಸ್, ನೀರು ಕಾಗೆ(ಗ್ರೇಟ್ ಇಂಡಿಯನ್ ಕಾರ್ಮೋರೆಂಟ್), ಕೊಕ್ಕರೆ(ಲಿಟ್ಲ್ ಎಗ್ರೆಟ್), ಜಾನುವಾರು ಬೆಳ್ಳಕ್ಕಿ(ಕ್ಯಾಟಲ್ ಎಗ್ರೆಟ್), ನೀಲಿ ನಾಮ ಕೋಳಿ(ಪರ್ಪಲ್ ಮೂರ್ ಹೆನ್), ತೇನೆ ಹಕ್ಕಿ(ರೆಡ್ ವ್ಯಾಟಲ್ಡ್ ಲ್ಯಾಪ್ ವಿಂಗ್), ಮೀನು ಗುಟುಕ(ರಿವರ್ ಟರ್ನ್) ಇನ್ನೂ ಮುಂತಾದ, ಅತ್ಯಂತ ವಿಶಿಷ್ಟ ಪಕ್ಷಿಗಳ ಸಮೂಹವೇ ಈ ಕೆರೆಯಲ್ಲಿ ಬೀಡು ಬಿಟ್ಟು, ಅಂತರಗಟ್ಟೆಯನ್ನು ಈ ಭಾಗದ ರಂಗನತಿಟ್ಟನ್ನಾಗಿಸಿ ಪಕ್ಷಿಪ್ರಿಯರನ್ನು ಸೆಳೆಯುತ್ತಿದೆ.

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ

## ವೃಷಭ ವಾಹನ

ಮನೆಯ ಮುಂದಿನ ಕಾಂಕ್ರೀಟ್ ರಸ್ತೆಯಲ್ಲಿ ಇಂಪಾದ ಕಿಣಿಕಿಣಿ ನಾದದೊಂದಿಗೆ ಬಲಶಾಲಿ ಎತ್ತೊಂದು ಯಲ್ಲಮ್ಮದೇವಿಯ ಮೂರ್ತಿ ಹೊತ್ತು ನಿಂತದ್ದು ಕಾಣಿಸಿತು. ಜನಮಾನಸದಿಂದ ಎಂದೋ ದೂರವಾಗಿದ್ದ ‘ಕೋಲೆಬಸವ’ನ ನೆನಪು ತರಿಸಿದರೂ ಇದು ಅದಲ್ಲವೆಂದು ಹಾಗೂ ಇದಕ್ಕೆ ಯಾವುದೇ ಆಟಗಳನ್ನು ಆಡಲು ತರಬೇತಿ ನೀಡಿಲ್ಲವೆಂದು ಅದರ ಮಾಲೀಕ ತಿಳಿಸಿದರು. ತಮ್ಮ ಹುಟ್ಟೂರಿನಿಂದ ಪಾದಯಾತ್ರೆ ಮೂಲಕ ಯಲ್ಲಮ್ಮನ ಕ್ಷೇತ್ರಕ್ಕೆ ತೆರಳುವುದು ಹಾಗೂ ಆ ಮಾರ್ಗದಲ್ಲಿ ಅಥವಾ ಅದರ ಆಸುಪಾಸಿನಲ್ಲಿ ಹೀಗೆ ಭಕ್ತರಿಗೆ ದರ್ಶನ ಮಾಡಿಸುತ್ತಾ ಹೋಗುವುದು ಇವರ ಯಾತ್ರೆಯ ಉದ್ದೇಶವಂತೆ. ಹೀಗೆ ವರ್ಷವಿಡೀ ಅಲೆಮಾರಿಗಳಾಗಿ ಸಾಗುವ ಇವರಿಗೆ ಹಳ್ಳಿಹಳ್ಳಿಗಳಲ್ಲಿ ಆಹಾರಮೇವಿನ ವ್ಯವಸ್ಥೆ ಇರುತ್ತದೆ. ಪಟ್ಟಣಗಳಲ್ಲಿ ಮಾತ್ರ ಮೇವು, ನೀರಿಗೂ ತತ್ವಾರ. ಎತ್ತುಗಳ ಕೋಡುಗಳನ್ನು ಸರಳವಾಗಿ ಅಲಂಕರಿಸಿ ಅದರಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಇರಿಸಲಾಗಿದೆ. ಆದರೆ ಎತ್ತಿಗೆ ಇತರ ಯಾವುದೇ ಅಲಂಕಾರಗಳಿಲ್ಲ. ರಸ್ತೆಯಲ್ಲಿ ಯಲ್ಲಮ್ಮನ ಮೂರ್ತಿಯನ್ನು ಹೊತ್ತುಕೊಂಡು ಈ ಎತ್ತುಗಳು ಗಜಗಾಂಭೀರ್ಯದಿಂದ ಹೆಜ್ಜೆ ಹಾಕುವುದನ್ನು ಕಂಡಾಗ ಮೈಸೂರಿನ ದಸರಾ ಉತ್ಸವದ ಜಂಬೂ ಸವಾರಿ ನೆನಪಾಯಿತು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

